48

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅ.ದೇವೇಗೌಡ ಇವರ ನಿಯಮ 72 ರಡಿ ನೀಡಿರುವ ಗಮನಸೆಳೆಯುವ ಸೂಚನೆಗೆ ಉತ್ತರ

**ಪ್ರಶ್ನೆ**

ಸಹಕಾರ ಸಂಘಗಳ ಕಾಯ್ದೆ ಕಲಂ 70 ಹಾಗೂ 71 ರಡಿಯ ಪ್ರಕರಣದಲ್ಲಿ, ಗೃಹ ನಿರ್ಮಾಣ ಸಹಕಾರ ಸಂಘಗಳ ಪ್ರಕರಣದ ಹಾಗೂ ಆದೇಶ ಹೊರಡಿಸುವಲ್ಲಿ ಜಂಟಿ ನಿಬಂಧಕರ ಕಛೇರಿಯಲ್ಲಿ ವಿನಾಕಾರಣ 8-9 ವರ್ಷಗಳ ವಿಳಂಬ ನೀತಿ ಅನುಸರಿಸಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ಹಾಗೂ ಇತ್ತೀಚಿನ ಭ್ರಷ್ಟಾಚಾರದಿಂದ, ಸಂಸ್ಥೆಯಲ್ಲಿ ದಾಳಿಗಳ ಬಗ್ಗೆ ಸಹಕಾರ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ**

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70 ರಡಿ ಸಂಘಗಳು ಅಥವಾ ಸಂಘದ ಸದಸ್ಯರುಗಳು, ಭಾದಿತರಾದಲ್ಲಿ ವ್ಯಾಜ್ಯ ದಾಖಲಿಸಲು ಅವಕಾಶಗಳನ್ನು ಕಲ್ಪಿಸಲಾಗಿದೆ. ಈ ರೀತಿ ದಾಖಲಾದ ವ್ಯಾಜ್ಯಗಳನ್ನು ಕಾಯ್ದೆ ಕಲಂ 71 ರಡಿಯಲ್ಲಿ ಇತ್ಯರ್ಥಗೊಳಿಸಲು ಅವಕಾಶಗಳನ್ನು ಕಲ್ಪಿಸಿದ್ದು, ಅದರಂತೆ ವ್ಯಾಪ್ತಿಯ ನಿಬಂಧಕರುಗಳು ತಾವೇ ವಿಚಾರಣೆ ನಡೆಸಬಹುದು ಅಥವಾ ಗೌರವ ಮಧ್ಯಸ್ಥದಾರರಿಗೆ ಅಥವಾ ಇಲಾಖಾ ಮಧ್ಯಸ್ಥದಾರರಿಗೆ ವಹಿಸಿಕೊಡಲು ಅವಕಾಶಗಳಿವೆ.

ಜಂಟಿ ನಿಬಂಧಕರ ಕಛೇರಿಯಲ್ಲಿ ಕಲಂ 70 ರಡಿ ದಾಖಲಾಗುವ ದಾವಾ ಪ್ರಕರಣಗಳ ವಿಚಾರಣೆಯನ್ನು ವಾರದಲ್ಲಿ 02 ದಿನ ನಡೆಸಲಾಗುತ್ತಿದೆ. ಸಹಕಾರ ಸಂಘಗಳ ಜಂಟಿ ನಿಬಂಧಕರ ಅರೆನ್ಯಾಯಿಕ (Quasi Judicial) ಪ್ರಾಧಿಕಾರವಾಗಿರುತ್ತಾರೆ. ಪ್ರಾಂತೀಯ ಜಂಟಿ ನಿಬಂಧಕರ ವ್ಯಾಪ್ತಿಯು 6-7 ಜಿಲ್ಲೆಗಳಿಗೆ (ಪ್ರಾಂತದಲ್ಲಿನ ಎಲ್ಲಾ ಜಿಲ್ಲೆಗಳಿಗೆ) ವ್ಯಾಪಿಸಿದ್ದು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಹಾಗೂ ಜಿಲ್ಲಾ ಸಹಕಾರ ಹಾಲು ಒಕ್ಕೂಟಗಳ ಸಭೆಗಳಲ್ಲಿ ಭಾಗವಹಿಸುವುದಲ್ಲದೇ ಪ್ರತಿ ಮಾಹೆಯಲ್ಲಿ ನಡೆಯುವ ಇಲಾಖಾ ಸಭೆಗಳಲ್ಲಿ ಹಾಜರಾಗಬೇಕಿರುತ್ತದೆ.

ಕಛೇರಿಯ ಆಡಳಿತಾತ್ಮಕ, ಕಾರ್ಯನಿರ್ವಾಹಕ ಹಾಗೂ ಶಾಸನಬದ್ಧ ಕೆಲಸ ಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ ಅಧೀನ ಕಛೇರಿಗಳ ಕಾರ್ಯವೈಖರಿಗಳ ಬಗ್ಗೆ ಮೇಲ್ವಿಚಾರಣೆಯನ್ನು ಸಹಾ ಮಾಡಬೇಕಿರುತ್ತದೆ. ಇಲಾಖೆಗೆ ಸಂಬಂಧಪಟ್ಟಂತೆ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸುವುದರ ಜೊತೆಗೆ ಸಹಕಾರ ಸಂಘ/ಸಂಸ್ಥೆಗಳಿಗೆ ಸಂಬಂಧಿಸಿದಂತೆ ಕಾಯ್ದೆ ಮತ್ತು ನಿಯಮಗಳ ಅನುಷ್ಠಾನದ ಜೊತೆಯಲ್ಲಿ ದಾವಾ ಪ್ರಕರಣಗಳ ಇತ್ಯರ್ಥವನ್ನು ಸಹ ಮಾಡಲಾಗುತ್ತಿದೆ.

ರಾಜ್ಯದ ಒಟ್ಟು 04 ಪ್ರಾಂತೀಯ ಜಂಟಿ ನಿಬಂಧಕರ ಕಛೇರಿಗಳಲ್ಲಿ ಕಲಂ 70 ರಡಿ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಕಳೆದ 05 ವರ್ಷಗಳಲ್ಲಿ ಒಟ್ಟು 283 ಪ್ರಕರಣಗಳು ದಾಖಲಾಗಿರುತ್ತದೆ. ಈ ಪೈಕಿ 148 ಪ್ರಕರಣಗಳು ಇತ್ಯರ್ಥಗೊಂಡಿದ್ದು, 135 ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇರುತ್ತದೆ.

ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ, ಬೆಳಗಾವಿ ಮತ್ತು ಕಲಬುರಗಿ ಪ್ರಾಂತದ ಜಂಟಿ ನಿಬಂಧಕರ ಕಛೇರಿಗಳಲ್ಲಿ ಕಳೆದ 05 ವರ್ಷಗಳಲ್ಲಿ ಕಲಂ 70 ರಡಿ ಯಾವುದೇ

ದಾವಾ ಪ್ರಕರಣಗಳು ದಾಖಲಾಗಿರುವುದಿಲ್ಲ. ಹಾಗೂ ಹಿಂದಿನ ಯಾವುದೇ ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇರುವುದಿಲ್ಲ.

ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ, ಮೈಸೂರು ಪ್ರಾಂತದ ಜಂಟಿ ನಿಬಂಧಕರ ಕಛೇರಿಯಲ್ಲಿ ಕಳೆದ 05 ವರ್ಷಗಳಲ್ಲಿ 20 ದಾವಾ ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 12 ದಾವಾ ಪ್ರಕರಣಗಳು ಇತ್ಯರ್ಥಗೊಂಡಿರುತ್ತದೆ. ಉಳಿದ 8 ದಾವೆಗಳು ವಿಚಾರಣೆಯಲ್ಲಿರುತ್ತವೆ. 03 ದಾವಾ ಪ್ರಕರಣಗಳು 05 ವರ್ಷಕ್ಕೆ ಮೇಲ್ಪಟ್ಟಿದ್ದು ಇವುಗಳನ್ನು ಜಂಟಿ ನಿಬಂಧಕರು ಇತ್ಯರ್ಥಗೊಳಿಸಿರುತ್ತಾರೆ. ಸದರಿ ಆದೇಶವನ್ನು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ಪ್ರಶ್ನಿಸಿದ್ದು, ಮೇಲ್ಮನವಿ ನ್ಯಾಯಾಧೀಕರಣವು ಮರುವಿಚಾರಣೆಗೆ ಆದೇಶಿಸಿದ್ದು, ಮರುವಿಚಾರಣೆ ನಡೆಸಲಾಗುತ್ತಿದೆ. ಯಾವುದೇ ಪ್ರಕರಣವನ್ನು 8-9 ವರ್ಷಗಳ ಕಾಲ ವಿಳಂಬ ಮಾಡಿರುವುದು ಕಂಡುಬರುವುದಿಲ್ಲ ಹಾಗೂ ಸದರಿ ಕಛೇರಿ ವ್ಯಾಪ್ತಿಯಲ್ಲಿ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ಪ್ರಕರಣಗಳು ಇರುವುದಿಲ್ಲ.

ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ, ಬೆಂಗಳೂರು ಪ್ರಾಂತದ ಜಂಟಿ ನಿಬಂಧಕರ ಕಛೇರಿಯಲ್ಲಿ ಕಳೆದ 05 ವರ್ಷಗಳಲ್ಲಿ 263 ದಾವಾ ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 136 ದಾವಾ ಪ್ರಕರಣಗಳು ಇತ್ಯರ್ಥಗೊಂಡಿರುತ್ತದೆ. ಉಳಿದಂತೆ 127 ದಾವಾ ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇರುತ್ತವೆ. ಬಾಕಿ ಇರುವ 127 ಪ್ರಕರಣಗಳ ಪೈಕಿ ಇಲಾಖಾ ಮಧ್ಯಸ್ಥದಾರರಿಗೆ 43 ಪ್ರಕರಣಗಳನ್ನು ವಹಿಸಲಾಗಿರುತ್ತದೆ. ಉಳಿದ 84 ಪ್ರಕರಣಗಳನ್ನು ಜಂಟಿ ನಿಬಂಧಕರು ವಿಚಾರಣೆ ಕೈಗೊಂಡಿರುತ್ತಾರೆ.

ಇದಲ್ಲದೇ 13 ಪ್ರಕರಣಗಳು 05 ವರ್ಷಕ್ಕಿಂತ ಮೇಲ್ಪಟ್ಟ ಪ್ರಕರಣಗಳಾಗಿದ್ದು, ಇದರಲ್ಲಿ 02 ಪ್ರಕರಣಗಳಲ್ಲಿ ಜಂಟಿ ನಿಬಂಧಕರ ಅಂತಿಮ ಆದೇಶವನ್ನು ಹಾಗೂ 11 ಪ್ರಕರಣಗಳಲ್ಲಿ ಮಧ್ಯಂತರ ಆದೇಶವನ್ನು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ಪ್ರಶ್ನಿಸಿದ್ದು, ಸದರಿ 13 ಪ್ರಕರಣಗಳನ್ನು ಮರುವಿಚಾರಣೆಗೆ ಆದೇಶಿಸಲಾಗಿರುತ್ತದೆ. ಮರುವಿಚಾರಣೆಗೆ ಆದೇಶಿಸಿದ 13 ಪ್ರಕರಣಗಳು ಸೇರಿದಂತೆ ಒಟ್ಟು 97 ಪ್ರಕರಣಗಳನ್ನು ಜಂಟಿ ನಿಬಂಧಕರು ವಿಚಾರಣೆ ನಡೆಸುತ್ತಿದ್ದಾರೆ.

ಸದರಿ ಕಛೇರಿಯಲ್ಲಿ ಕಲಂ 70 ರ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಯಾವುದೇ ದಾಳಿ ಪ್ರಕರಣಗಳು ನಡೆದಿರುವುದಿಲ್ಲ. ದೂರುಗಳ ಹಿನ್ನೆಲೆಯಲ್ಲಿ ಭ್ರಷ್ಟಾಚಾರ ನಿಗ್ರಹ ಧಳ, ಬೆಂಗಳೂರು ರವರು ದಿನಾಂಕ:07.08.2021 ರಂದು ಸಹಾಯಕ ನಿಬಂಧಕರು ಹಾಗೂ ಸಹಕಾರ ಸಂಘಗಳ ಉಪನಿಬಂಧಕರು, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಕಛೇರಿಯಲ್ಲಿ ದಾಳಿ ನಡೆಸಿದ್ದು, ಈ ದಾಳಿಯು ಕಲಂ 70 ರ ವಿಚಾರಣೆಗೆ ಸಂಬಂಧಪಟ್ಟಿರುವುದಿಲ್ಲ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70 ರಡಿ ದಾಖಲಾಗಿರುವ ದಾವೆಗಳಿಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ಹಾಗೂ ದಾಳಿ ಪ್ರಕರಣಗಳು ಇರುವುದಿಲ್ಲ. ಬಾಕಿ ಇರುವ ಪ್ರಕರಣಗಳು ವಿಚಾರಣಾ ಹಂತದಲ್ಲಿರುವುದರಿಂದ ಆಧ್ಯತೆ ಮೇಲೆ ಇತ್ಯರ್ಥಗೊಳಿಸಲು ಕ್ರಮವಿಡಲಾಗುವುದು.

**ಸಿಒ 36 ಸಿಹೆಚ್ಎಸ್ 2021 (ಇ)**

**(ಎಸ್.ಟಿ.ಸೋಮಶೇಖರ್)**
**ಸಹಕಾರ ಸಚಿವರು**